## ಕೊಬ್ಬು ಮಗುವಿಗೆ ಅಪಾಯಕಾರಿ

ಗರ್ಭಿಣಿಯರು ನಾಲಿಗೆ ರುಚಿಗೆಂದು ಕೊಬ್ಬಿನಂಶ ಹೆಚ್ಚಿರುವ ತಿಂಡಿ ಸೇವಿಸಿದರೆ ಹುಟ್ಟುವ ಮಗುವಿಗೆ ಅಪಾಯವಾದೀತು. ಮಗು ಆಜನ್ಮ ಸಮಸ್ಯೆಗಳಿಂದ ಬಳಲಬಹುದು ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ.

ಗರ್ಭಿಣಿಯ ಆಹಾರವು ಮಗುವಿನ ಜೀನ್ಸ್ ಜೊತೆ ಆಟವಾಡುವ ಸಂಭವವಿದೆ. ಇದರಿಂದ ಕಂಜೆನಿಟಲ್ ಹೃದ್ರೋಗ ಹಾಗೂ ಸೀಳು ತುಟಿಯಂಥ ಸಮಸ್ಯೆಗಳು ಶಿಶುವಿಗೆ ಬರುವ ಸಾಧ್ಯತೆ ಅಧಿಕ. ಜೀನ್ಸ್– ಪರಿಸರದ ಪರಿಣಾಮಗಳು ಗರ್ಭಾಶಯದಲ್ಲಿರುವ ಭ್ರೂಣಕ್ಕೆ ಅಪಾಯ ಉಂಟು ಮಾಡುತ್ತವೆ ಎಂಬುದು ಬ್ರಿಟನ್ನಿನ ಸಂಶೋಧಕರು ನಡೆಸಿದ ಸಂಶೋಧನೆಯಿಂದ ಗೊತ್ತಾಗಿದೆ. ಮಧುಮೇಹದಿಂದ ನರಳುತ್ತಿರುವ ಹಾಗೂ ಅಧಿಕ ತೂಕವಿರುವ ತಾಯಂದಿರಿಗೆ ಜನಿಸುವ ಮಕ್ಕಳು ಹೃದಯದ ಸಮಸ್ಯೆ ಹೊತ್ತು ಹುಟ್ಟುತ್ತವೆ ಎಂಬುದು ಬಹಳ ಹಿಂದೆಯೇ ಗೊತ್ತಾಗಿದೆ. ಕೆಲವು ಪೌಷ್ಟಿಕಾಂಶಗಳ ಕೊರತೆಯಿಂದ ಜೆನೆಟಿಕ್ ಬದಲಾವಣೆ ಉಂಟಾಗುತ್ತದೆ ಎಂಬುದು ತಿಳಿದು ಬಂದಿದೆ. ಈಗ ಕೆಲವು ಹೊರಗಿನ ಅಂಶಗಳು, ಅಂದರೆ ಆಹಾರ ಕೂಡಾ ಜೀನ್ಸ್ ಬದಲಾವಣೆ ಮಾಡಿ ಮಗುವಿನಲ್ಲಿ ಊನ ಸೃಷ್ಟಿಸುತ್ತದೆ ಎಂಬುದನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ.

ಹೀಗಾಗಿ ಗರ್ಭಿಣಿಯರು ಸಮತೋಲನ ಆಹಾರ ಸೇವಿಸಬೇಕು. ಕೊಬ್ಬಿನಂಶವಿರುವ ಆಹಾರ ತ್ಯಜಿಸಿದರೆ ಒಳಿತು.

## ಇ–ತ್ಯಾಜ್ಯದಿಂದ ಅಸ್ತಮಾ

ಕಂಪ್ಯೂಟರ್, ಪ್ರಿಂಟರ್ ಮೊದಲಾದ ಇ–ತ್ಯಾಜ್ಯವನ್ನು ಮರುಸಂಸ್ಕರಿಸುವ ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಅಸ್ತಮಾ ಹಾಗೂ ಬ್ರೋಂಕೈಟಿಸ್ ಕಾಯಿಲೆ ಬರುವ ಸಾಧ್ಯತೆ ಅಧಿಕ.

ದೆಹಲಿಯ ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜಿನ ಟಿ.ಕೆ.ಜೋಶಿ ನಗರದ ಮರುಸಂಸ್ಕರಣ ಕೇಂದ್ರದಲ್ಲಿ ಕೆಲಸ ಮಾಡುವ 250 ಕಾರ್ಮಿಕರನ್ನು ತಪಾಸಣೆಗೆ ಒಳಪಡಿಸಿದಾಗ ಈ ಎಲ್ಲಾ ಕಾರ್ಮಿಕರೂ ಅಸ್ತಮಾ ಮತ್ತು ಬ್ರೋಂಕೈಟಿಸ್ ಕಾಯಿಲೆಯಿಂದ ಬಳಲುತ್ತಿರುವುದು ಪತ್ತೆಯಾಯಿತು. ಅವರ ರಕ್ತದಲ್ಲಿ ಸೀಸ, ಪಾದರಸ, ಕ್ರೋಮಿಯಂ ಅಂಶ ಸಾಮಾನ್ಯಕ್ಕಿಂತ 20 ಪಟ್ಟು ಅಧಿಕವಾಗಿತ್ತು. ಇದು ಶ್ವಾಸಕೋಶ, ಮೂತ್ರಪಿಂಡ, ಜೀರ್ಣಾಂಗ ವ್ಯೂಹದ ಮೇಲೆ ಪರಿಣಾಮ ಬೀರುತ್ತದೆ. ಜೊತೆಗೆ ಕ್ಯಾನ್ಸರ್ ಕೂಡಾ ಉಂಟು ಮಾಡುತ್ತದೆ. ಮರುಸಂಸ್ಕರಣ ಪ್ರಕ್ರಿಯೆಯಲ್ಲಿ ಆಮ್ಲ ಮತ್ತು ಕಾಸ್ಟಿಕ್ ಸೋಡಾ ಬಳಕೆ ಜಾಸ್ತಿ. ಕಾರ್ಮಿಕರು ದೀರ್ಘಕಾಲ ಈ ವಿಷಕಾರಿ ರಾಸಾಯನಿಕ ಹಾಗೂ ಹೊಗೆಯಲ್ಲಿ ಕೆಲಸ ಮಾಡುತ್ತಾರೆ. ರಾಸಾಯನಿಕ ದ್ರವದಲ್ಲಿ ಬರಿಗೈ ಅದ್ದುತ್ತಾರೆ. ಇದು ತೀರಾ ಅಪಾಯಕಾರಿ.

## ಅಧಿಕ ರಕ್ತದೊತ್ತಡ

ಮಧುಮೇಹದ ಜೊತೆ ಹೃದ್ರೋಗ ಇರುವವರು ಅಧಿಕ ರಕ್ತದೊತ್ತಡವನ್ನು ಕಟ್ಟುನಿಟ್ಟಾಗಿ ನಿಯಂತ್ರಣದಲ್ಲಿಟ್ಟುಕೊಂಡರೂ ಅಪಾಯದ ಸಂಭವ ಇದ್ದೇ ಇರುತ್ತದೆ. ಮಧುಮೇಹಿಗಳು ವಿವಿಧ ಔಷಧಗಳನ್ನು ಸೇವಿಸಿ ಬಿ.ಪಿ.ಯನ್ನು 130ರಷ್ಟು ಇಟ್ಟುಕೊಂಡರೂ ಅಪಾಯ ಇದ್ದೇ ಇರುತ್ತದೆ ಎನ್ನುತ್ತಾರೆ ತಜ್ಞರು.

ಆರೋಗ್ಯವಂತರಲ್ಲಿ ಬಿ.ಪಿ. 120/80. ಮಧುಮೇಹ, ಬಿ.ಪಿ. ಎರಡೂ ಅಧಿಕ ಇರುವವರಲ್ಲಿ ನಿಯಂತ್ರಣಕ್ಕೆ 2–3 ಬಗೆಯ ಔಷಧ ಕೊಟ್ಟರೂ ನಿಯಂತ್ರಣ ಕಷ್ಟಸಾಧ್ಯ. ಹೀಗಾಗಿ ಪಥ್ಯ, ವ್ಯಾಯಾಮ, ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿಟ್ಟುಕೊಳ್ಳುವ ಬಗ್ಗೆ ಸಲಹೆ ನೀಡಲಾಗುತ್ತದೆ.

## ಘನೀಕೃತ ರಕ್ತದಿಂದ ಸ್ಟೆಮ್‌ಸೆಲ್

ಘನೀಕರಿಸಿದ ರಕ್ತದಲ್ಲಿ ಸ್ಟೆಮ್‌ಸೆಲ್ ಹೋಲುವ ಕೋಶಗಳಿರುತ್ತವೆ. ಇದನ್ನು ಸ್ಟೆಮ್‌ಸೆಲ್ ಬದಲಿಯಾಗಿ ಬಳಸಬಹುದು ಎನ್ನುತ್ತಾರೆ ಮೆಸಾಚೂಸೆಟ್ಸ್‌ನ ಜೀವವೈದ್ಯಕೀಯ ಸಂಶೋಧನ ಕೇಂದ್ರ ಜ್ಯುಡಿತ್.

ಘನೀಕೃತ ರಕ್ತದಿಂದ ಪ್ಲುರಿಪೋಟೆಂಟ್ ಅಥವಾ ಐಪಿಎಸ್ ಕೋಶಗಳನ್ನು ತಯಾರಿಸಬಹುದು. ಇದು ಮಾನವ ಭ್ರೂಣದ ಸ್ಟೆಮ್‌ಸೆಲ್ ಅನ್ನು ಹೋಲುತ್ತದೆ. ಇದನ್ನು ಪ್ರಯೋಗಕ್ಕಾಗಿ ಮಾತ್ರ ಸದ್ಯಕ್ಕೆ ಬಳಸಲಾಗುತ್ತದೆ.

## ನಿದ್ರಾಹೀನತೆ ಬೊಜ್ಜಿನ ಪ್ರತೀಕ

ಮಧ್ಯ ವಯಸ್ಸಿನವರಲ್ಲಿ ನಿದ್ರೆ ಮಾಡಲು ತೊಂದರೆಯಾದರೆ ಅದು ಬೊಜ್ಜಿನ ಪ್ರಭಾವ. ಅದರಲ್ಲೂ ಮಹಿಳೆಯರಲ್ಲಿ ಈ ಸಮಸ್ಯೆ ಜಾಸ್ತಿಯಂತೆ.

ಫಿನ್ಲೆಂಡ್ ಸಂಶೋಧಕರು ನಿದ್ರೆ ಬಾರದ ಮಹಿಳೆಯರ ಮೇಲೆ ಅಧ್ಯಯನ ಕೈಗೊಂಡು ಈ ಅಂಶವನ್ನು ಪತ್ತೆ ಹಚ್ಚಿದ್ದಾರೆ. ಅದರಲ್ಲೂ ನಿದ್ರೆ ಬಾರದೆ ಹೊರಳಾಡುವ ಮಹಿಳೆಯರಿಗೆ ಮುಂದೆ ತೂಕ ಹೆಚ್ಚಾಗುವ ಸಂಭವವೂ ಇದೆ ಎನ್ನುತ್ತಾರೆ ಸಂಶೋಧಕರು.

■ ಸುಧಿ



ಬಿಳಿ ಮಚ್ಚೆಗಳೆ

ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



ಲೈಂಗಿಕ ಸಮಸ್ಯೆ

ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ


ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881
09931840701 / 09334221088
09431025482 / 09835671211